# ಕರ್ನಾಟಕ ವಿಧಾನಪರಿಷತ್ತು

| | |
|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1105(1075) |
| 2. ಸದಸ್ಯರ ಹೆಸರು | ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | 22.09.2022 |
| 4. ಉತ್ತರಿಸುವ ಸಚಿವರು | ಮುಖ್ಯಮಂತ್ರಿಯವರು |

| ಪ್ರಶ್ನೆ | ಉತ್ತರ |
|---|---|
| (ಅ)ಒಬ್ಬ ಸರ್ಕಾರಿ ನೌಕರ/ ಅಧಿಕಾರಿಯು ಕ್ರಿಮಿನಲ್ ಮತ್ತು ಇಲಾಖಾ ವಿಚಾರಣೆಗಳಲ್ಲಿ ದೋಷಮುಕ್ತಗೊಂಡು, ಉನ್ನತ ಶ್ರೇಣಿಗೆ ಮುಂಬಡ್ತಿ ಹೊಂದಿದ್ದರೂ ಸಹ ಅಂತಹ ಸರ್ಕಾರಿ ನೌಕರ/ಅಧಿಕಾರಿಯ ಹಿಂದಿನ ಘಟನೆಗಳ ಅಥವಾ ಪ್ರಕರಣಗಳ ಹಿನ್ನೆಲೆಯಲ್ಲಿ ಇಲಾಖೆ ಮುಖ್ಯಸ್ಥರು ಮೌಖಿಕವಾಗಿ ಅಥವಾ ಕಛೇರಿ ಪತ್ರ ವ್ಯವಹಾರಗಳಲ್ಲಿ ಲಿಖಿತವಾಗಿ ಪ್ರಸ್ತಾಪಿಸಬಹುದೇ; (ವಿವರಗಳನ್ನು ಒದಗಿಸುವುದು) | ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರಡಿ ಇಲಾಖಾ ವಿಚಾರಣೆ ಅಥವಾ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ವಿಚಾರಣೆಯನ್ನು ಪ್ರಾರಂಭಿಸುವ ಹಾಗೂ ಅಂತಿಮಗೊಳಿಸುವ ನಿರ್ಧಾರಗಳನ್ನು ಸರ್ಕಾರಿ/ಕಛೇರಿ ಆದೇಶವನ್ನು ಹೊರಡಿಸುವ ಮೂಲಕ ದಾಖಲಿಸಲಾಗುತ್ತದೆ. ಇಂತಹ ಆದೇಶಗಳು ಅಧಿಕೃತ ದಾಖಲೆಗಳೆನಿಸಿಕೊಳ್ಳುತ್ತವೆ. |
| (ಆ) ಒಬ್ಬ ಸರ್ಕಾರಿ ನೌಕರ/ಅಧಿಕಾರಿಯ ವಿರುದ್ಧದ ಕ್ರಿಮಿನಲ್ ಮತ್ತು ಇಲಾಖಾ ವಿಚಾರಣೆಗಳು ತಾರ್ಕಿಕವಾಗಿ ಅಂತ್ಯಗೊಂಡು ಉನ್ನತ ಶ್ರೇಣಿಗೆ ಮುಂಬಡ್ತಿಗೊಂಡ ಬಳಿಕ, ಅಂತಹ ಸರ್ಕಾರಿ ನೌಕರ/ಅಧಿಕಾರಿಯ ಮೇಲಿದ್ದ ಕ್ರಿಮಿನಲ್ ಮತ್ತು ಇಲಾಖಾ ವಿಚಾರಣೆಯ ವಿವರಗಳನ್ನು ಸೇವಾ ದಾಖಲೆಯಿಂದ ತೆಗೆದು ಹಾಕಲಾಗುವುದೇ? (ವಿವರಗಳನ್ನು ಒದಗಿಸುವುದು) | ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 398ರಲ್ಲಿ, ಸರ್ಕಾರಿ ನೌಕರನ ಸರ್ಕಾರಿ ಸೇವೆಯು ಒಳಗೊಳ್ಳುವ ಪರಿವೀಕ್ಷಣಾ ಅವಧಿ ಘೋಷಣೆ, ಬಡ್ತಿ, ವರ್ಗಾವಣೆ, ರಜೆ, ಗೈರುಹಾಜರಿ ಇತ್ಯಾದಿಗಳನ್ನು ಮತ್ತು ನಿಯಮ 400ರಲ್ಲಿ ಶಿಸ್ತುಕ್ರಮಕ್ಕೆ ಒಳಗಾದ ಸರ್ಕಾರಿ ನೌಕರನಿಗೆ ವಿಧಿಸಲಾದ ದಂಡನೆಯ ಆದೇಶದ ಪ್ರತಿಯನ್ನು ಕಾರಣದೊಂದಿಗೆ ಅವನ ಸೇವಾ ಪುಸ್ತಕದಲ್ಲಿ ದಾಖಲಿಸಲು ಉಪಬಂಧಗಳನ್ನು ಕಲ್ಪಿಸಲಾಗಿದೆ. ಸೇವಾ ಪುಸ್ತಕದಲ್ಲಿ ದಾಖಲಿಸಲ್ಪಟ್ಟ ಎಲ್ಲಾ ಸೇವಾ ವಿವರಗಳು ಶಾಶ್ವತ ದಾಖಲೆಗಳಾಗಿರುತ್ತವೆ. |

ಸಂಖ್ಯೆ: ಇ-ಸಿಆಸುಇ 91 ಸೇಇವಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ